**ಮೂರನೆ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ. ನ್ಯಾಯಾಲಯ ಕನಕಪುರ**

**ಸಿ.ಸಿ.ನಂಃ 1568/2021**

ಪಿರ್ಯಾದುದಾರರುಃ ಕನಕಪರ ಟೌನ್ ಪೊಲೀಸರು.

ವಿರುದ್ಧ

ಆರೋಪಿತರು : 1. ನಾಗೇಂದ್ರ
ಬಿನ್ ಮಂಜುನಾಥ,
ವಯಸ್ಸು 29 ವರ್ಷಗಳು,
ವಾಸಃ ಮಳಗಾಳು ಗ್ರಾಮ,
ಕನಕಪುರ ಟೌನ್,
ಕನಕಪುರ ತಾಲ್ಲೂಕು.

2. ಮಧುಕರ್ @ ಮೈಕಲ್
ಬಿನ್ ಲೇಟ್ ಚಿಕ್ಕಮರಿಗೌಡ,
ವಯಸ್ಸು 32 ವರ್ಷಗಳು,
ವಾಸಃ ಹೆಚ್.ಎಂ.ದೊಡ್ಡಿ ಗ್ರಾಮ,
ಕನಕಪುರ ಟೌನ್ ಮತ್ತು ತಾಲ್ಲೂಕು,
ರಾಮನಗರ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ದಾಖಲಿಸಿಕೊಂಡ ಆಪಾದಿತನ ಹೇಳಿಕೆ**

ಪ್ರಶ್ನೆ-1 ಈ ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

1 ಆರೋಪಿಃ ಉತ್ತರಃ

2 ಆರೋಪಿಃ ಉತ್ತರಃ

ಪ್ರಶ್ನೆ-2) ಪ್ರಾಸಾ-1/ಸಂದೀಪ್ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುದೇನೆಂದರೇ, ದಿನಾಂಕ: 18.12.2020 ರಂದು ಕನಕಪುರದ ಚೆನ್ನಗಿರಿ

ಮೆಸ್ ಹತ್ತಿರ ಇರುವ ಬೆಸ್ಕಾಂ ನ ಪೀಡರ್ ಬಾಕ್ಸ್ ಅನ್ನು ಚಾರ್ಜ ಮಾಡಲು ಬೆಸ್ಕಾಂನ ಸಿಬ್ಬಂದಿಯಾದ ಚಾ.ಸಾ. 2 ರವರು ಹೋದಾಗ ಆರೋಪಿತರಾದ ನೀವು ಚಾರ್ಜ ಮಾಡಲು ಬಿಟ್ಟಿರುವುದಿಲ್ಲ. ಆಗ ಚಾ.ಸಾ. 2 ರವರು ತನಗೆ ಕರೆ ಮಾಡಿ ವಿಷಯ ತಿಳಿಸಿದ್ದು, ತಾನು ಸ್ಥಳಕ್ಕೆಹೋಗಿ ಪೀಡರ್ ಬಾಕ್ಸ್ ಅನ್ನು ಚಾರ್ಜ ಮಾಡಲು ಹೋದಾಗ ಆರೋಪಿತರಾದ ನೀವು ತನಗೆ ಚಾರ್ಜ ಮಾಡಲು ಬಿಡುವುದಿಲ್ಲ. ಆಗ ಅವರು ಬೆಸ್ಕಾಂನ ಸಹಾಯಕ ಅಭಿಯಂತರರು ಆಗಿದ್ದು, ಗ್ರಾಹಕರಿಗೆ ವಿದ್ಯುತ್ ಅನ್ನು ಕೊಡಬೇಕಾಗಿರುವುದರಿಂದ ಪೀಡರ್ ಬಾಕ್ಸ್ ಅನ್ನು ಚಾರ್ಜ ಮಾಡಲು ಬಿಡಿ ಎಂದು ಹೇಳಿ ಮುಂದೆ ಹೋದಾಗ, 1 ನೇ ಆರೋಪಿಯಾದ ನೀವು ಅವರ ಕಪಾಳಕ್ಕೆ ಹೊಡೆದಾಗ ಅವರು ಹಾಕಿಕೊಂಡಿದ್ದ ಚೆಸ್ಮ ಕೆಳಗೆ ಬಿದ್ದು ಮುರಿದು ಹೋಗಿದ್ದು, ಆಗ ಅವರು ಪೋಲಿಸರಿಗೆ ಪೋನ್ ಮಾಡಬೇಕೆಂದು ಪೋನನ್ನು ತೆಗೆದುಕೊಂಡಾಗ ಆರೋಪಿತರಾದ ನೀವು ಅವರ ಪೋನ್ ಅನ್ನು ಕಿತ್ತುಕೊಂಡು ಹೊಡೆದು ಹಾಕಿ, ಸುಮಾರು 6 ಸಾವಿರ ನಷ್ಟವುಂಟು ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಅವರ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ್ದು, ನಂತರ ಸ್ಥಳಕ್ಕೆ ಪೊಲೀಸರು ಬಂದರು ಮತ್ತು ಜನರು ಸೇರಿದ್ದು, ಅಷ್ಟರಲ್ಲಿ ಆರೋಪಿತಾದ ನೀವು ಓಡಿ ಹೋಗಿದ್ದು, ನಂತರ ಅವರು ಏಟಾಗಿದ್ದರಿಂದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಅಲ್ಲಿಂದ ಠಾಣೆಗೆ ಹೋಗಿ ಆರೋಪಿತರಾದ ನೀಮ್ಮ ವಿರುದ್ಧ ದೂರು ಕೊಟ್ಟಿದ್ದು, ದಿನಾಂಕಃ 19.12.2021 ರಂದು ಪೊಲೀಸರು ಅವರ ಮತ್ತು ಚಾಸಾ-5 ಮತ್ತು 6 ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಸಂಜೆ 5 ಗಂಟೆಯಿಂದ 5.45 ಗಂಟೆಯವರೆಗೆ ಪಂಚನಾಮೆ ಮಾಡಿ ಒಡೆದು ಹೋಗಿದ್ದ ಅವರ ಪೋನ್ ಅನ್ನು ವಶಪಡಿಸಿಕೊಂಡರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

1 ಆರೋಪಿಃ ಉತ್ತರಃ ಸುಳ್ಳು

2 ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-3) ಪ್ರಾಸಾ-3/ವೀಣಾ ವೈದಾಧಿಕಾರಿಯಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ, ದಿನಾಂಕಃ 18.12.2020 ರಂದು ಸಂಜೆ 7.50 ಗಂಟೆ ಸಮಯದಲ್ಲಿ, ತಾನು ಕರ್ತವ್ಯದಲ್ಲಿದ್ದಾಗ, ಸುಮಾರು 27 ವರ್ಷ ವಯಸ್ಸಿನ ಮಂಟೇಲಿಂಗಯ್ಯ ಎಂಬುವವರು ಇಲಾಖಾ ವಾಹನದಲ್ಲಿ ಬಂದಿದ್ದು, ಅದೇ ದಿನ ಸಂಜೆ 5.05 ಗಂಟೆಯಲ್ಲಿ ಎಂ.ಜಿ. ರಸೆಯ ಬಳಿ,ಸಂದ್ಯಾ ಸ್ಪಿರಿಟ್ ಬಾರ್ ಎದುರು ಅಪರಿಚಿತ ವ್ಯಕ್ತಿಗಳಿಂದ ಮಂಜುನಾಥ ಎಂಬುವವರ ಮೇಲೆ ಹಲ್ಲೆ ನಡೆದಿದ್ದು, ಅವರು ವಿದ್ಯುತ್ ಇಂಜಿನಿಯರಿಂಗ್ ಕರ್ತವ್ಯದಲಿಲದ್ದಾಗ, ಅವರಿಗೆ ಹೊಡೆದು ತಳ್ಳಿ ಹಲ್ಲೆ ಮಾಡಲಾಗಿದ್ದು, ತಾನು ಅವರನ್ನು ಪರಿಶೀಲಿಸಿದಾಗ, ಅವರ ಬಲಗೈ ಹಿಂಭಾಗದ ಮದ್ಯದ ಬೆರಳಿನ ಮದ್ಯದ 1/3 ಭಾಗದಷ್ಟು ಊತ ಕಂಡುಬಂದಿರುತ್ತದೆ. ಸದರಿ ಗಾಯಗಳು ತನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಗಾಯಗಳು ಎಂದು ನಿಪಿ-3 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

1 ಆರೋಪಿಃ ಉತ್ತರಃ ಸುಳ್ಳು

2 ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-4) ಪ್ರಾಸಾ-3 ವರುಣ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ ದಿನಾಂಕಃ 18.07.2020 ರಂದು ಸಂಜೆ 4.50 ಗಂಟೆಗೆ ಕನಕಪುರ ಟೌನ್ ಚಿನ್ನಗಿರಿ ಮೆಸ್ ಹತ್ತಿರ ಇರುವ ಪೀಡರ್ ಬಾಕ್ಸ ಅನ್ನು ಚಾರ್ಜ ಮಾಡಲು ಹೋದಾಗ ನಾಗೇಂದ್ರ ಎಂಬ ವ್ಯಕ್ತಿ ಮತ್ತು ಇನ್ನೊಬ್ಬ ಚಾರ್ಜ ಮಾಡಲು ಬಿಡಲಿಲ್ಲ. ಆಗ ತನ್ನ ಮೇಲಾದಿಕಾರಿಯಾದ ಚಾ.ಸಾ. 1 ಸಂದೀಪ್ ರವರಿಗೆ ತಿಳಿಸಿದ್ದು, ಅವರು ಸ್ಥಳಕ್ಕೆ ಬಂದು ಪೀಡರ್ ಬಾಕ್ಸ ಅನ್ನು ಚಾರ್ಜ ಮಾಡಲು ಬಿಡಿ ಎಂದು ಹೇಳಿದಾಗ, ನಾಗೇಂದ್ರ ಮತ್ತು ನಿಮ್ಮ ಜೊತೆ ಇದ್ದ ಇನ್ನೊಬ್ಬ ವ್ಯಕ್ತಿ ಚಾರ್ಜ ಮಾಡಲು ಬಿಡಲಿಲ್ಲ. ಆಗ ಚಾ.ಸಾ. 1 ರವರು ಅವರು ಬೆಸ್ಕಾಂ ಎ.ಇ. ಎಂದು ತಿಳಿದರೂ ಅವರಿಗೆ ಬೈದು ಅವರ ಕಪಾಳಕ್ಕೆ ಹೊಡೆದು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು, ಆಗ ಅವರು ಹಾಕಿದ್ದ ಕನ್ನಡಕ ಕೆಳಗೆ

ಬಿದಿದ್ದು, ನಂತರ ಆರೋಪಿತರಾದ ನೀವು ಅವರ ಕೈಯಲ್ಲಿದ್ದ ಮೊಬೈಲನ್ನು ಕಿತ್ತುಕೊಂಡು ನೆಲಕ್ಕೆ ಬಿಸಾಕಿದ್ದು, ನಂತರ ಅವರು ಇಲಾಖಾ ವಾಹನದಲ್ಲಿ ಚಾ.ಸಾ. 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಪೋಲಿಸ್ ಠಾಣೆಗೆ ಬಂದಿದ್ದು, ಅಲ್ಲಿ ಚಾ.ಸಾ. 1 ರವರು ದೂರು ಕೊಟ್ಟಿದ್ದು, ತಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

1 ಆರೋಪಿಃ ಉತ್ತರಃ ಸುಳ್ಳು

2 ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-5) ಪ್ರಾಸಾ-4 ಶಿವರಾಜು ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ ದಿನಾಂಕಃ 19.12.2020 ರಂದು ಸಂಜೆ 5.00 ಗಂಟೆಗೆ ತನ್ನ ಹಾಗೂ ಚಾ.ಸಾ. 1 ರವರ ಸಮಕ್ಷಮ ಪೋಲಿಸರು ಕನಕಪುರದ ಸಂಜಯ್ ಸ್ಪಿರಿಟ್ಸ್ ಎದುರು ಕೃಷ್ಣ ಮೂರ್ತಿ ಎನ್ನುವರ ಜಾಗದಲ್ಲಿ ಇರುವ ಪೀಡರ್ ಬಾಕ್ಸ್ ಎದುರು ಚಾ.ಸಾ. 1 ರವರ ಬಳಿಯಿಂದ ಒಂದು ಮೊಬೈಲ್ ಅನ್ನು ಪೋಲಿಸರು ವಶಪಡಿಸಿಕೊಂಡಿದ್ದು, ಪೋಲಿಸರು ನಿ.ಪಿ.2 ಪಂಚನಾಮೆಯನ್ನು ಆರ್,ಕೆ. ಕೃಷ್ಣಮೂರ್ತಿರವರಿಗೆ ಸೇರಿದ ಬಾಡಿಗೆ ಅಂಗಡಿಯ ಪಿಶ್ ಮತ್ತು ಚಿಕನ್ ಕಬಾಬು ಅಂಗಡಿಯ ಮುಂಭಾಗ ಇರುವ ಪೀಡರ್ ಬಾಕ್ಸ ಎದುರು ತನ್ನ ಹಾಗೂ ಚಾ.ಸಾ. 1 ಮತ್ತು 5 ರವರ ಸಮಕ್ಷಮ ಮಾಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

1 ಆರೋಪಿಃ ಉತ್ತರಃ ಸುಳ್ಳು

2 ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-5) ಪ್ರಾಸಾ-5 ಬಸವರಾಜ್ ಉಳವಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ ದಿನಾಂಕಃ 18.12.2020 ರಂದು ಸಂಜೆ 7 ಗಂಟೆಗೆ ತಾನು ಠಾಣಾಯಲ್ಲಿದ್ದಾಗ, ಚಾ.ಸಾ. 1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 116/2020 ರಂದು ಪ್ರಥಮ

ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ದಿನಾಂಕಃ 19.12.2020 ರಂದು ಸಂಜೆ 5 ಗಂಟೆಯಿಂದ 5.45 ಗಂಟೆವರೆಗೆ ಚಾ.ಸಾ, 1, 5 ಮತ್ತು 6 ರವರ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಘಟನಾ ಸ್ಥಳದಲ್ಲಿ ಜಖಂ ಗೊಂಡಿದ್ದ ಒಂದು ಮೊಬೈಲನ್ನು ಪಂಚನಾಮೆ ಮೂಲಕ ಜಪ್ತುಪಡಿಸಿಕೊಂಡಿದ್ದು, ಜಪ್ತುಪಡಿಸಿಕೊಂಡ ಮೊಬೈಲ್ ಬಗ್ಗೆ ಪಿ.ಎಫ್. ಅನ್ನು ದಾಖಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು , ನಂತರ ಮುಂದಿನ ತನಿಖೆಗಾಗಿ ಚಾ.ಸಾ. 9 ರವರಿಗೆ ವಹಿಸಿಕೊಟ್ಟೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

1 ಆರೋಪಿಃ ಉತ್ತರಃ ಸುಳ್ಳು

2 ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-6) ಪ್ರಾಸಾ-6/ಲಕ್ಷ್ಮಣ್ ಗೌಡ ಎಸ್ ರವರು ತನಿಖಾಧಿಕಾರಿಯಾಗಿದ್ದು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ, ದಿನಾಂಕಃ 19.12.2020 ರಂದು ಈ ಪ್ರಕರಣದ ಕಡತವನ್ನು ಚಾ.ಸಾ. 8 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿನಾಂಕಃ 20.12.2020 ರಂದು 1 ನೇ ಆರೋಪಿಯನ್ನು ಪತೆ ಮಾಡಲು ಚಾ.ಸಾ. 8 ಮತ್ತು ಠಾಣಾ ಪೇದೆ ಸಂಖ್ಯೆಃ 307 ರವರನ್ನು ನೇಮಿಸಿದ್ದು, ಅವರು ಅದೇ ದಿನ 1 ನೇ ಆರೋಪಿಯನ್ನು ಮಳಗಾಳು ಬಳಿ ಹಿಡಿದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿದ್ದು ತಾನು ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ದಿನಾಂಕಃ 11.01.2021 ರಂದು 2 ನೇ ಆರೋಪಿ ಪತ್ತೆ ಮಾಡಲು ಠಾಣಾ ಪೋಲಿಸ್ ಮುಖ್ಯ ಪೇದೆ 407 ಮತ್ತು ಪೋಲಿಸ್ ಪೇದೆ 307 ರವರನ್ನು ನೇಮಿಸಿದ್ದು, ಅವರು 2 ನೇ ಆರೋಪಿಯನ್ನು ಎಂ.ಹೆಚ್.ಎಸ್. ಮೈದಾನದ ಬಳಿ ಹಿಡಿದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿದ್ದು, ತಾನು 2 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲಕಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದೇ ದಿನ ಚಾ.ಸಾ. 1 ರವರ ಮುಂದುವರೆದ ಹೇಳಿಕೆ ಮತ್ತು ಚಾ.ಸಾ. 2 ಮತ್ತು 3

ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ದಿನಾಂಕಃ 12.02.2021 ರಂದು ಚಾ.ಸಾ. 1 , 2 ಮತ್ತು 4 ರವರ ಕರ್ತವ್ಯದ ದೃಡೀಕರಣ ಪತ್ರ ಪಡೆದುಕೊಂಡು, ದಿನಾಂಕಃ 20.02.2021 ರಂದು ಚಾ.ಸಾ. 1 ರವರ ಗಾಯದ ಪ್ರಮಾಣಪತ್ರವನ್ನು ಕನಕಪುರದ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿದ್ದು, ನಂತರ ದಿನಾಂಕಃ 05.05.2021 ರಂದು ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿತರಾದ ನಿಮ್ಮ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

1 ಆರೋಪಿಃ ಉತ್ತರಃ ಸುಳ್ಳು

2 ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-7) ನಿಮ್ಮ ಪರವಾಗಿ ನೀವು ಏನನ್ನಾದರೂ ಹೇಳುವುದಿದೆಯಾ?

1 ಆರೋಪಿಃ ಉತ್ತರಃ

2 ಆರೋಪಿಃ ಉತ್ತರಃ

ಪ್ರಶ್ನೆ-8) ನಿಮ್ಮ ಪರ ಪ್ರತಿರಕ್ಷಣೆಯ ಸಾಕ್ಷ್ಯ ವಿಚಾರಣೆ ಮಾಡುವುದಿದೆಯಾ?

1 ಆರೋಪಿಃ ಉತ್ತರಃ

2 ಆರೋಪಿಃ ಉತ್ತರಃ

ಈ ಮೇಲಿನ ಹೇಳಿಕೆಗಳನ್ನು ಆಪಾದಿತನಿಗೆ ಓದಿ ಹೇಳಿ ಆಪಾದಿತನು ನೀಡಿದ ಉತ್ತರವನ್ನು ಆತ ಹೇಳಿದಂತೆ ಯಥವತ್ತಾಗಿ ದಾಖಲಿಸಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಕನಕಪುರ
ದಿನಾಂಕಃ 26.03.2026

(ರವಿಪ್ರಕಾಶ್ ಟಿ .ಆವಿನ್)
ಮೂರನೇ ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ.. ದಂ. ಕನಕಪುರ.

ಆರೋಪಿತರ ಸಹಿ: